ZEE ಕನ್ನಡ

# ಹೊಸ ಕಥೆ, ಹೊಸ ಜೋಡಿ ವಿದ್ಯಾ ವಿನಾಯಕ

ಸದಾ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ವೀಕ್ಷಕ ಬಳಗವನ್ನು ರಂಜಿಸಿ ಮನಗೆದ್ದಿರುವ ಜೀ ಕನ್ನಡ ಈಗ ಫಿಕ್ಷನ್ ವಿಭಾಗದಲ್ಲಿ ನಾಗಿಣಿ, ಗಂಗಾ, ಬ್ರಹ್ಮಗಂಟು, ಜೋಡಿಹಕ್ಕಿ, ಸುಬ್ಬಲಕ್ಷ್ಮಿ ಸಂಸಾರ, ನಿಗೂಢ ರಾತ್ರಿ ಮತ್ತು ಇತ್ತೀಚಿನ ಯಾರೇ ನೀ ಮೋಹಿನಿಯ ಯಶಸ್ಸಿನ ನಂತರ, ನವಿರಾದ ಪ್ರೀತಿ ಕಥೆಯುಳ್ಳ ಹೊಸ ಧಾರಾವಾಹಿ 'ವಿದ್ಯಾ ವಿನಾಯಕ' ದೊಂದಿಗೆ ಬರ್‍ತಾ ಇದೆ.

ದಿವಾನ್ ಕುಟುಂಬ ಒಂದು ತುಂಬಿದ ಮನೆ. ಇಲ್ಲಿ ತಾತ-ಅಜ್ಜಿ, ಅಪ್ಪ-ಅಮ್ಮ ಅತ್ತೆ-ಮಾವ, ಅಣ್ಣ-ತಮ್ಮ, ಅಕ್ಕ-ತಂಗಿ ಎಲ್ಲಾ ಇದ್ದಾರೆ. ನಮ್ಮ ಕಥಾನಾಯಕಿಯೂ ಇದೇ ಮನೆಯವಳೇ. ಅವಳಿಗೆ ಬುದ್ಧಿ ತಿಳಿದಾಗಿನಿಂದ ಅವಳು ಇದೇ ಮನೆಯಲ್ಲಿದ್ದಾಳೆ. ಅವಳು ಈ ಮನೆಯಲ್ಲಿದ್ದಾಳಷ್ಟೇ, ಆದರೆ ಮನೆಮಗಳಲ್ಲ, ಮನೆಯ ಸದಸ್ಯರಿಗೆ ಅವಳು ಎಲ್ಲಿಂದಲೋ ಬಂದವಳು ಅಂತ ಮಾತ್ರ ಗೊತ್ತು ವಿನಃ, ಎಲ್ಲಿಂದ, ಯಾಕೆ ಬಂದಿದ್ದಾಳೆ ಅನ್ನೋದು ಮಾತ್ರ ಗೊತ್ತಿಲ್ಲ,ಯಾರೂ ಪ್ರಶ್ನಿಸಿಲ್ಲ, ಯಾಕೆಂದರೆ ಅವಳನ್ನು ಮನೆಗೆ ತಂದಿರಿಸಿಕೊಂಡಿರುವವಳು ಆ ಮನೆಯೊಡತಿ. ಮನೆಯವರನ್ನು ತನ್ನವರೆಂದು ನಂಬಿರುವ ವಿದ್ಯಾ, ಅವರ ಜೊತೆ ಬೆರೆತು ಖುಷಿಯಾಗಿದ್ದಾಳೆ.ಎಲ್ಲರ ಸಂತೋಷಕ್ಕೂ ಕಾರಣವಾಗಿದ್ದಾಳೆ.

ಗಡಿಯಾರದ ಮುಳ್ಳಿನಂತೆ ಒಂದು ನಿಮಿಷವೂ ಬಿಡುವಿಲ್ಲದ ವ್ಯಕ್ತಿ, ಶಿಸ್ತಿನ ಸಿಪಾಯಿ ಈ ಕಥೆಯ ನಾಯಕ - ವಿನಾಯಕ. ತನ್ನ ಸುತ್ತಲಿನ ಎಲ್ಲವೂ, ಎಲ್ಲರೂ ಅಚ್ಚುಕಟ್ಟಾಗಿರಬೇಕು ಎನ್ನುವ ಧೋರಣೆಯ ಈತ ಅತಿಯಾದ ಶುಚಿತ್ವ ಬಯಸುವವನು.

ಮದುವೆಯ ವಿಚಾರದಲ್ಲಿ ನಮ್ಮ ನಾಯಕ ನಾಯಕಿಯರದ್ದು ತದ್ವಿರುದ್ಧ ಮನಸ್ಥಿತಿ. ಮದುವೆಯಿಂದಲೇ ಹೊಸಬಾಳು ಎಂದು ವಿದ್ಯಾ ನಂಬಿದರೆ, ಮದುವೆಯಿಂದಲೇ ಎಲ್ಲಾ ಸಂಬಂಧ ಹಾಳು ಅನ್ನುತ್ತಾನೆ ವಿನಾಯಕ.

ಒಟ್ಟಿನಲ್ಲಿ ಪ್ರೀತಿ, ಬಾಂಧವ್ಯ, ಜೀವನಶೈಲಿ ಎಲ್ಲದರಲ್ಲೂ ಉತ್ತರ - ದಕ್ಷಿಣದಂತಿರುವ ಈ ವಿದ್ಯಾ-ವಿನಾಯಕ ಮದುವೆಯಾಗಿ ಒಟ್ಟಾದರೆ ಹೇಗಿರುತ್ತೆ? ನೀವೆ ನೋಡಿ. ಪ್ರತಿಯೊಂದು ಹಂತದಲ್ಲೂ ನವಿರಾದ ರೊಮ್ಯಾನ್ಸ್ ಮತ್ತು ಕುತೂಹಲ ಇರೋ

**ವಿದ್ಯಾ ವಿನಾಯಕ ಧಾರಾವಾಹಿ ಇದೇ ಅಕ್ಟೋಬರ್ 30 ರಿಂದ ನಿಮ್ಮ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ.**

